# ಪ್ರಬಂಧ



ಗೋಪುರಕ್ಕೆ ಆಗಾಗ ಕಟ್ಟಲು ಬರುವ ಜೇನುಗಳನ್ನು ಉಡಾಯಿಸಲೆಂದೇ ಕೆಲವು ಪರಿಣತರಿಗೆ ವರ್ಷವಿಡೀ ಗುತ್ತಿಗೆ ಕೊಡಲಾಗುತ್ತದೆ. 'ಸರಕಾರದ ಕೆಲಸ ದೇವರ ಕೆಲಸ' ಎಂಬ ಫಲಕದ ಆಜೂಬಾಜಿನಲ್ಲೇ ರಾತ್ರಿವೇಳೆಯಲ್ಲಿ ಇವರ ದಾನವೀಯ ಕೆಲಸ ನಡೆಯುತ್ತದೆ. ಸತ್ತುಬಿದ್ದ ಲಕ್ಷೋಪಲಕ್ಷ ಜೇನ್ನೊಣಗಳನ್ನು ಮುಂಜಾನೆ ಬಾಚಿ ಬಾಚಿ ದಫನ ಮಾಡುತ್ತಾರೆ.

ಜೇನ್ನೊಣಗಳು ಇದುವರೆಗೆ ಯಾವ ಅಧಿಕಾರಿಯನ್ನೂ ಕಚ್ಚಿದ್ದಿಲ್ಲ. ಆದರೆ ಸರಕಾರಿ ಸಿಬ್ಬಂದಿಯ ಮನೋಭಾವ ಗೊತ್ತಲ್ಲ? ತಮ್ಮ ಮೇಲೆ ಯಾರಾದರೂ ಕಣ್ಣಿಟ್ಟಿದ್ದಾರೆ ಎಂಬ ಭ್ರಮೆ ಮತ್ತು ಭಯದ ನೆರಳಲ್ಲೇ ಅವರು ಸದಾ ಕಡತಗಳ ಮರೆಯಲ್ಲಿ ಕೂತಿರುತ್ತಾರೆ. ನಗರಗಳಲ್ಲಿ ಹೆಜ್ಜೇನುಗಳಿಗೆ ಉಳಿಗಾಲವಿಲ್ಲ; ಅರಣ್ಯಗಳಲ್ಲಿ ಎತ್ತರದ ಮರಗಳೇ ಇಲ್ಲ. ಇನ್ನೇನು ಮಾಡಬೇಕು ಅವು? ಅರಣ್ಯಗಳನ್ನು ಮುಳುಗಿಸಿ ನಿರ್ಮಿಸಿದ ಎತ್ತರದ ಸುಪಾ ಅಣೆಕಟ್ಟೆಯ ಕಾಂಕ್ರೀಟ್ ಜಂತಿಯ ಮೇಲೆ ಅವು ಗೂಡು ಕಟ್ಟುತ್ತಿದ್ದವು. ತಮ್ಮ ಪಾಡಿಗೆ ದಿನವೂ ಹತ್ತಾರು ಕಿಲೊಮೀಟರ್ ಸುತ್ತಾಡಿ ಅವು ಕಾಡಿನ ಹೂಗಳಿಗೆ ಪರಾಗಸ್ಪರ್ಶ ಮಾಡಿ ಮಕರಂದವನ್ನು ಸಂಗ್ರಹಿಸುತ್ತವೆ. ಕಾಡಿನಲ್ಲಿ ಮುರುಗಲ, ನೆಲ್ಲಿ, ಅಂಟುವಾಳ, ಸೀಗೆಕಾಯಿ ಈಗಲೂ ಸಿಗುತ್ತಿವೆ ಎಂದರೆ ಅದಕ್ಕೆ ಇಂಥ ಜೇನುಗಳೇ ಕಾರಣ. ಆದರೆ ನೋಡಿ, ನಗರದ ವಿಷಸೇನರು ಸುಪಾ ಅಣೆಕಟ್ಟೆಗೂ ಹೋಗಿ ಜೇನುಗೂಡಿನ ಮೇಲೆ ದಾಳಿಯಿಡುತ್ತಾರೆ.

'ಯಾಕೆ ಇವರಿಗೆ ಹೆಜ್ಜೇನು ನಾಶಕ್ಕೆ ಪರ್ಮಿಟ್ ಕೊಡ್ತೀರಾ?' ಎಂದು ಅರಣ್ಯಾಧಿಕಾರಿಗಳನ್ನು ಕೇಳಿದರೆ, 'ಸುಪಾ ಡ್ಯಾಮು ನಮ್ಮ ವ್ಯಾಪ್ತಿಗೆ ಬರೋದಿಲ್ರೀ; ಅದು ಕೆಪಿಸಿಗೆ ವಿದ್ಯುತ್ ಕಂಪನಿಯ ಸುಪರ್ದಿಗೆ ಬರ್ತದೆ' ಎಂದು ಸಮಜಾಯಿಷಿ ನೀಡುತ್ತಾರೆ. ನಿಸರ್ಗಕ್ಕಿಲ್ಲದ ಗಡಿ ಸಮಸ್ಯೆ ನಿಸರ್ಗದ ಮಧ್ಯೆಯೇ ತಲೆ ಎತ್ತಿದೆ.

ನಮ್ಮ ಮನೆಯಲ್ಲಿ ಗೂಡು ಕಟ್ಟಿದ ಹೆಜ್ಜೇನಿನ ಬಗ್ಗೆ ಸದ್ಯ ಯಾರಿಗೂ ಗೊತ್ತಾಗಿಲ್ಲ. ಗೊತ್ತಾದರೆ ಅದರ ವಿರುದ್ಧ ಇಲ್ಲೂ ಮಸಲತ್ತು ಜೋರಾಗುತ್ತದೆ.

ಹಿಂದೊಮ್ಮೆ ಹೀಗೇ ಆಗಿತ್ತು. ಇಪ್ಪತ್ತು ವರ್ಷಗಳ ಹಿಂದೆ ಬಿಟಿಎಮ್ ಲೇಔಟ್‌ನಲ್ಲಿ ವಾಸವಿದ್ದಾಗ ನಮ್ಮ ಮನೆಯ ಸಜ್ಜಾದಲ್ಲೇ ಹೆಜ್ಜೇನೊಂದು ಠಿಕಾಣಿ ಹೂಡಲು ಬಂದಿತ್ತು ಎಂದೆನಲ್ಲ? ನೆರೆಹೊರೆಯವರಿಗೆ ಆ ಸುದ್ದಿ ಗೊತ್ತಾಗಿ ನಮ್ಮ ಮನೆಗೆ ಒಂದರಮೇಲೆ ಒಂದರಂತೆ ನಿಯೋಗ ಬಂದಿತ್ತು. 'ಹೊಗೆ ಹಾಕಿ ಓಡಿಸಿಬಿಡಿ; ಅಥವಾ ರಾತ್ರಿ ವೇಳೆ ಪಾಯ್ಸನ್ ಸ್ಪ್ರೇ ಮಾಡಿಸಿಬಿಡಿ– ಎಲ್ಲ ನಾಶ ಆಗ್ತವೆ' ಎಂದೆಲ್ಲ ಅಕ್ಕಪಕ್ಕದ ನಿವಾಸಿಗಳು ಒತ್ತಾಯ, ಧಮ್ಕಿ ಎಲ್ಲ ಹಾಕಿದ್ದರು.

ನಾವು ಜಪ್ಪೆಂದಿರಲಿಲ್ಲ. ಹೆಜ್ಜೇನು ಆರೆಂಟು ತಿಂಗಳು ಸಹಬಾಳ್ವೆ ನಡೆಸಿತ್ತು. ಮಾರಗಲ ರಟ್ಟು ನಿರ್ಮಿಸಿಕೊಂಡು ತಮ್ಮ ಪಾಡಿಗೆ ತಾವಿಗೆ ತಾವಿದ್ದವು. ಹಾಲ್ ಕಿಟಕಿಯನ್ನೂ ತೆರೆದೇ ಇಟ್ಟಿದ್ದರೂ (ಮೂರಡಿ ದೂರದಲ್ಲಿದ್ದ) ಅವು ಎಂದೂ ಒಳಕ್ಕೆ ಬರಲಿಲ್ಲ. ಬಾಡಿಗೆ ಕೊಡುತ್ತಿರಲಿಲ್ಲ ಎಂಬುದನ್ನು ಬಿಟ್ಟರೆ ಅವುಗಳಿಂದ ನಮಗೆ ಯಾವ ಬೇಜಾರೂ ಇರಲಿಲ್ಲ. ಕೊನೆಗೊಂದು ದಿನ, ನಮ್ಮ ಕುಟುಂಬ ರಜೆಯ ಮೇಲೆ ಹೋಗಿದ್ದಾಗ ಯಾರೋ ಏನೋ ಮಾಡಿರಬೇಕು. ರೆಕ್ಕೆ ಅರಳಿಸಿ ನಿಂತ ಗರುಡನಂತೆ ದಿಗಂಬರ ರಟ್ಟು ಮಾತ್ರ ಉಳಿದಿತ್ತು. ಜೇನ್ನೊಣಗಳು ಏನಾದುವೊ ಏನೊ.

ಈ ಬಾರಿ ನಾವು ಕಟ್ಟೆಚ್ಚರದಿಂದ ಕಾಯಲು ನಿರ್ಧರಿಸಿದ್ದೇವೆ. ವಿಷ ಸಿಂಚನ ಮಾಡಲೆಂದು ಯಾರಾದರೂ ದಾಳಿಗೆ ಬರುವ ಸೂಚನೆ ಕಂಡರೆ ನಾವೇ ನಮ್ಮ ಜೇನ್ನೊಣಗಳನ್ನು ಪರಾರಿ ಮಾಡಿಸುತ್ತೇವೆ. ಅದಕ್ಕೆ ಉಪಾಯ ಕೂಡ ಸುಲಭ. ನಮ್ಮ ಬಾತ್‌ರೂಮ್‌ನಲ್ಲಿ ಅಗರಬತ್ತಿ ಹಚ್ಚಿಟ್ಟು ಎಕ್ಸ್‌ಹಾಸ್ಟ್ ಫ್ಯಾನ್ ಆನ್ ಮಾಡಿದರೆ ಸಾಕು. ಹೊಗೆಯೆಲ್ಲ ನೇರವಾಗಿ ಗೂಡಿಗೇ ಗುರಿಯಿಟ್ಟು ಚಿಮ್ಮುತ್ತದೆ. ವಿಷವಿಟ್ಟು ಕೊಲ್ಲುವ ಬದಲು ಹೊಗೆ ಹಾಕಿ ದೂರ ಹೋಗುವಂತೆ ಮಾಡಬಹುದು.

ದೂರ ಅಂದರೆ ತುಂಬ ದೂರ ಹೋಗಬೇಕಾಗಿ ಬರಬಹುದು. ಇನ್ನೇನು ಚುನಾವಣೆ ಬಂತಲ್ಲ; ರಾಜಕಾರಣಿಗಳು ಹಳ್ಳಿಗಳಿಗೆ, ಎತ್ತರದ ದೇಗುಲಗಳಿಗೆ, ಮತಗಟ್ಟೆಗಳಿಗೆ ಭೇಟಿ ಕೊಡುವುದರಿಂದ ಭದ್ರತಾ ದೃಷ್ಟಿಯಿಂದ ಅಲ್ಲೆಲ್ಲೂ ಹೆಜ್ಜೇನು ಕೂರುವಂತಿಲ್ಲ. ಮತದಾರರಿಲ್ಲದ ದೂರದ ಕಾಡನ್ನು ಹುಡುಕುತ್ತ ಅಂಡಲೆಯಬೇಕಾಗುತ್ತದೆ. ಅವಕ್ಕೆ ಆ ಪಾಡು ಬಾರದಂತೆ ನೋಡಿಕೊಳ್ಳುವ ಭಾರ ನಮ್ಮದಾಗಿದೆ.

●